## ಕಳೆದ ಸಂಚಿಕೆಯಲ್ಲಿ



ಮಸಾಜ್ ಪಾರ್ಲರ್‌ಗೆ ಬಂದ ಪಾಲ್ ಸ್ಕಾಟ್ ಎನ್ನುವ ವ್ಯಕ್ತಿ ನ್ಯಾನ್ಸಿಯ ಪಾಲಿಗೆ ಬರಿಯ ಗಿರಾಕಿಯಾಗಿಯಷ್ಟೆ ಉಳಿಯಲಿಲ್ಲ. ಆತನೊಂದಿಗೆ ಆತ್ಮೀಯತೆ ಬೆಳೆಯಿತು. ಮಸಾಜ್ ಪಾರ್ಲರ್‌ನ ವಹಿವಾಟು ಬೆಳೆಯಲು ಪಾಲ್ ನೆರವಾದ. ನ್ಯಾನ್ಸಿ ತನ್ನ ಜೀವನ ವೃತ್ತಾಂತವನ್ನು ಹೇಳಿಕೊಳ್ಳುವ ಮಟ್ಟಿಗೆ ಇಬ್ಬರ ನಡುವೆ ಆತ್ಮೀಯತೆ ಬೆಳೆಯಿತು. ಡೆನ್ಮಾರ್ಕ್‌ನಲ್ಲಿ ಬದುಕು ಕಂಡುಕೊಂಡಿರುವ ನ್ಯಾನ್ಸಿ ಮೂಲತಃ ಕೇರಳದ ಮಲಪ್ಪುರಂನವಳು. ಅಪ್ಪ–ಅಮ್ಮ, ನಾಲ್ಕು ಮಕ್ಕಳ ತುಂಬು ಕುಟುಂಬ. ನ್ಯಾನ್ಸಿ ಹಾಗೂ ಅವಳ ತಮ್ಮ ಅವಳಿ ಜವಳಿ. ಮಕ್ಕಳು ಚಿಕ್ಕವಳಿದ್ದಾಗಲೇ ಹೆಂಡತಿ ಕ್ಯಾನ್ಸರ್‌ಗೆ ಬಲಿಯಾದಾಗ, ಅಪ್ಪ ಮರುಮದುವೆಯಾಗಲಿಲ್ಲ. ಅಕ್ಕನ ಮಕ್ಕಳಿಗೆ ಕುಂಜಮ್ಮಾಳ ಅಕ್ಕರೆ ದೊರೆಯಿತು. ಮಕ್ಕಳನ್ನು ನೋಡಿಕೊಳ್ಳಲಿಕ್ಕಾಗಿಯೇ ನ್ಯಾನ್ಸಿಯ ಮನೆಯ ಪಕ್ಕದಲ್ಲಿಯೇ ಆಕೆ ತನ್ನ ಕುಟುಂಬದೊಂದಿಗೆ ಬಂದು ನೆಲೆಸಿದಳು. ಆಕೆಯ ಬದುಕಿನಲ್ಲೂ ಒಂದು ವಿಫಲವಾದ ಪ್ರೇಮಕಥೆಯಿದ್ದು, ಆ ಕಹಿ ಅವಳನ್ನು ಬಾಧಿಸುತ್ತಿತ್ತು.

ಅಬ್ರಾಹಮ್ ಒಬ್ಬ ಪಾದರಿಯಾಗಿದ್ದಾನೆ. ಅವನ ಹೆಂಡತಿಯಾಗುವುದರ ಅರ್ಥ ನಿನಗೆ ಅರಿವಿದೆಯೇ?'

'ಹೌದಪ್ಪಾ, ಗೊತ್ತಿದೆ.'

'ಅಬ್ರಾಹಮ್ ನಿನ್ನನ್ನು ತುಂಬಾ ಹೊಗಳುತ್ತಿದ್ದ... ನೀನು ಅವನಿಗೆ ಯೋಗ್ಯ ಹೆಂಡತಿ, ನಿನಗೆ ಚರ್ಚ್‌ನ ಕಾರ್ಯಕಲಾಪಗಳು ಮತ್ತು ಚಟುವಟಿಕೆಗಳ ಪರಿಚಯವಿದೆ ಎಂದು ಹೇಳುತ್ತಿದ್ದ.'

'ಹೌದು ಕುಂಜಮ್ಮಾ, ನನಗೆ ಅಬ್ರಾಹಮ್ ಇಷ್ಟವಾಗಿದ್ದಾನೆ. ಐ ಲವ್ ಹಿಮ್.'

ನಾನು ಹುಚ್ಚಿಯಾಗಿದ್ದೇನೆ ಎಂಬಂತೆ ಕುಂಜಮ್ಮಾ ನನ್ನನ್ನು ದುರುಗುಟ್ಟಿ ನೋಡಿದಳು, ನಂತರ ತನ್ನ ಕಣ್ಣುಗಳನ್ನು ಹೊರಳಿಸುತ್ತಾ ನಿಟ್ಟುಸಿರುಬಿಟ್ಟಳು, 'ಸತ್ಯ ನಾಶವಾಯ್ತು, ಹುಡುಗಿ!' – ನಂತರ ಅಪ್ಪನ ಬಗ್ಗೆ ಸಿಟ್ಟಿನಿಂದ ಹೇಳಿದಳು, 'ಮಕ್ಕಳನ್ನು ಚರ್ಚ್ ಕೆಲಸಕ್ಕೆ ಹಚ್ಚಿದರೆ ಹೀಗೆಯೇ ಆಗುವುದು; ಸಂಡೆ ಸ್ಕೂಲ್... ಜೀಸಸ್ ಪಾಠ... ಈಸ್ಟರ್ ಆರಾಧನೆ... ಲೆಂಟೆನ್ ಪ್ರಾರ್ಥನೆ... ಇನ್ನು ಮಕ್ಕಳ ಆಸಕ್ತಿಗಳು ಎಲ್ಲಿ ಚಿಗುರುತ್ತವೆ? ಮಕ್ಕಳು ತಮ್ಮ ಸಂಗಾತಿಗಳನ್ನು ಚರ್ಚ್‌ನಲ್ಲಿಯೇ ಹುಡುಕಿಕೊಳ್ಳುತ್ತಿದ್ದಾರೆ, ಶಾಲೆ–ಕಾಲೇಜುಗಳಲ್ಲಿ ಹುಡುಕಿಕೊಳ್ಳುತ್ತಿಲ್ಲ.'

'ಕುಂಜಮ್ಮಾ, ಅಬ್ರಾಹಮ್ ವಿದ್ಯಾವಂತ, ಒಳ್ಳೆಯ ಹುಡುಗ. ಅವನು ಪಾದರಿಯಾದರೆ ಏನಂತೆ? ಪಾದರಿಯಾಗುವುದು ಸಹ ಒಂದು ಉದ್ಯೋಗವೇ.'

'ಅಯ್ಯೋ, ಈ ಲವ್ ಮಂತ್ರವೇ...! ಈ ಮೂರ್ಖತನಕ್ಕೆ ಏನು ಹೇಳುವುದು? ಪ್ರೀತಿ ಕುರುಡು ಅಂತ ಯಾರೋ ಹೇಳಿರುವುದು ನಿಜವೇ... ನೋಡ್ತಿರಿ, ಮುಂದೆ ಅಪ್ಪ–ಮಗಳು ಪಶ್ಚಾತ್ತಾಪಪಡ್ತೀರಿ... ಧರ್ಮಗುರು, ಧರ್ಮಾಧ್ಯಕ್ಷರಿಗೆ ಮೂರು ಕಾಸಿನ ಬೆಲೆಯಿಲ್ಲ. ಢೋಂಗಿಗಳು...ಹೂಂ...!'

'ಕುಂಜಮ್ಮಾ!' ನಾನು ಸಿಟ್ಟಿನಿಂದ ಕಿರುಚಿದೆ.

'ಕುಂಜಮ್ಮಾ! ನಾಲಿಗೆಯ ಮೇಲೆ ಹಿಡಿತವಿರಲಿ' ಅಪ್ಪ ಸಹ ರೇಗಿದರು.

'ನಾನು ನಿಜವನ್ನು ಕಕ್ಕುತ್ತೇನೆ. ನನಗೆ ಈ ಧರ್ಮಗುರುಗಳು ಇಷ್ಟವಾಗಲ್ಲ. ಇವರು ವಿವಾದಕ್ಕೆ ಒಳಗಾಗುತ್ತಾರೆ. ಅವರ ಪ್ರಭಾವದಿಂದ ದೂರವಿರಬೇಕು' ಎನ್ನುತ್ತಾ ಕುಂಜಮ್ಮಾ ನನ್ನ ಮತ್ತು ಅಪ್ಪನ ನಡುವೆಯಿಂದ ಸರಿದು, ಕಾಲುಗಳನ್ನು ನೆಲಕ್ಕೆ ಬಡಿಯುತ್ತಾ ತನ್ನ ಮನೆಗೆ ಹೋದಳು.

'ಪ್ರೀತಿ ನಿಜಕ್ಕೂ ಕುರುಡೇ?' ಪಾಲ್ ನನ್ನನ್ನು ಪ್ರಶ್ನಿಸುತ್ತಿದ್ದಾನೆ.

ನಾನು ಯೋಚಿಸಿದೆ. ನಾನು ಒಂದಾದ ನಂತರ ಒಂದರಂತೆ ಮೂರು ಪ್ರೇಮ ವಿವಾಹನ್ನು ಮಾಡಿಕೊಂಡೆ. ಯಾರೊಂದಿಗೂ ಬಾಳಲು ಸಾಧ್ಯವಾಗಲಿಲ್ಲ. ಎಲ್ಲರೂ ವಂಚಿಸಿದರು; ಒಬ್ಬ ಮೋಸವೆಸಗಿದ, ಇನ್ನೊಬ್ಬ ಹೊಡೆದು ಬಡಿಯುತ್ತಿದ್ದ, ಮಗದೊಬ್ಬ ಒಂದೊಂದು ನಯಾಪೈಸೆಗೂ ಒದ್ದಾಡಿಸಿದ.

'ಹೌದು ಪಾಲ್, ಈ ಹೇಳಿಕೆಯಲ್ಲಿ ಸ್ವಲ್ಪ ನಿಜಾಂಶವಿದೆ. ಪ್ರೀತಿಸುವವರು ಸಾಮಾನ್ಯವಾಗಿ ಆ ಗೂಢ ತತ್ಥಗಳಡೆಗೆ ಗಮನವನ್ನು ಕೊಡುವುದಿಲ್ಲ, ಆದರೆ ಬೇರೆಯವರು ಅದನ್ನು ನೋಡುತ್ತಾರೆ. ಪ್ರೀತಿಸುವವರ ಕಣ್ಣುಗಳು ಎಲ್ಲವನ್ನೂ ನೋಡಲಾರದು.'

'ನಿಮ್ಮ ಸಂಸ್ಕೃತಿಯಲ್ಲಿ ಈಗಲೂ ಅನೇಕ ವಿವಾಹಗಳು ತಂದೆ–ತಾಯಿಯಿಂದ ನಿಶ್ಚಿತವಾಗುತ್ತವೆ. ಅವರ ಕಣ್ಣುಗಳು ಎಲ್ಲವನ್ನೂ ನೋಡುತ್ತವೆಯೇ?'

'ಬಹುಶಃ ಇಲ್ಲ. ನನ್ನ ಅನೇಕ ಗೆಳತಿಯರ ವಿವಾಹವನ್ನು ಅವರ ಪರಿವಾರದವರು ನಿಶ್ಚಯಿಸಿದ್ದರು, ಆದರೆ ಆ ವಿವಾಹಗಳು ಫ್ಲಾಪ್ ಆದವು. ವಾಸ್ತವವಾಗಿ ಅರೇಂಜಡ್ ಮ್ಯಾರೇಜ್ ಮತ್ತು ಲವ್ ಮ್ಯಾರೇಜ್ ಎರಡರಲ್ಲೂ ಒಳಿತು ಕೆಡುಕುಗಳಿವೆ. ಪ್ರೇಮ ವಿವಾಹದಲ್ಲಿ ಜೋಡಿಗಳು ಪರಸ್ಪರ ಅರಿತುಕೊಳ್ಳಲು ಸಾಕಷ್ಟು ಅವಕಾಶಗಳು ಸಿಗುತ್ತವೆ. ಆದರೆ ಅವರು ಪ್ರೀತಿಯಲ್ಲಿ ಎಷ್ಟು ಮೈಮರೆಯುತ್ತಾರೆಂದರೆ, ಅನೇಕ ವಿಷಯಗಳನ್ನು ಅವರು ಗಮನಿಸುವುದೇ ಇಲ್ಲ. ಅವರದೇ ಆದ ಒಂದು ವಸ್ತುನಿಷ್ಠ ದೃಷ್ಟಿಕೋನವಿರುವುದಿಲ್ಲ. ಅರೇಂಜಡ್ ಮ್ಯಾರೇಜಿನಲ್ಲಿ ತಂದೆ–ತಾಯಿ ತಮ್ಮ ಸಂಸ್ಕೃತಿ, ಪರಿವಾರದ ಸ್ಥಿತಿಗತಿ, ಪರಿಸರ ಮತ್ತು ಸಾಮಾಜಿಕ ಪದ್ಧತಿಗಳನ್ನು ಮರೆಯುತ್ತಾರೆ; ಹುಡುಗ ಹುಡುಗಿಯರ ಹೊಂದಾಣಿಕೆಯನ್ನು ಗಮನಿಸುವುದಿಲ್ಲ. ಪಾಲ್, ಈ ಬಗ್ಗೆ ನೀವೇನು ಹೇಳುತ್ತೀರ?'

'ನನಗೆ ತಿಳಿದಂತೆ, ವಿವಾಹದ ಯಶಸ್ಸು ಇಬ್ಬರು ವ್ಯಕ್ತಿಗಳನ್ನು ಅವಲಂಬಿಸಿದೆ. ಆದರೆ ಪರಿವಾರದ ಮೌಲ್ಯಗಳು, ಸಾಮಾಜಿಕ ಮಾನದಂಡಗಳು ಮತ್ತು ಕಾನೂನು ನಿಯಮಗಳು ಸಹ ವಿಶೇಷ ಪ್ರಭಾವವನ್ನು ಬೀರುತ್ತವೆ.'

'ಸರಿಯಾಗಿಯೇ ಹೇಳುತ್ತಿದ್ದೀರಿ. ಈ ವಿಷಯಗಳು ನಮ್ಮ ಸಂಸ್ಕಾರ ಮತ್ತು ಅಭಿಪ್ರಾಯಗಳನ್ನು ಪೋಷಿಸುತ್ತವೆ. ಅಲ್ಲದೆ ವಿವಾಹದ ಬಗ್ಗೆ ನಮ್ಮ ಬದ್ಧತೆಯನ್ನು ನಿರ್ಧರಿಸುತ್ತವೆ. ವ್ಯಕ್ತಿಗೆ ವಿಕಲ್ಪವೇನು ಎಂಬುದು ಸಹ ಮಹತ್ವದ ಸಂಗತಿಯಾಗಿದೆ. ಅನೇಕ ಜೋಡಿಗಳು ಬೇರೆ ಮಾರ್ಗವಿಲ್ಲದೆ ಒಟ್ಟಿಗೆ ಇರಬೇಕಾಗುತ್ತದೆ; ಕಾರಣ, ಅವರ ಬಳಿ ವಿಕಲ್ಪವಿಲ್ಲ. ಸಮಾಜ ಸಹ ವಿಚ್ಛೇದನದ ಬಗ್ಗೆ ಸಹಜವಾಗಿಲ್ಲ. ಬದುಕು ಅಥವಾ ಸಾಯಿ, ಆದರೆ ಜೊತೆಯಲ್ಲಿರು ಎಂಬಂಥ ಪರಿಸ್ಥಿತಿ ಎದುರಾಗುತ್ತದೆ. ಅವರು ಜೊತೆಯಲ್ಲಿರುವಂತೆ ನಾಟಕವಾಡುತ್ತಾರೆ, ಆದರೆ ಅವರೊಳಗೆ ಬೆಂಕಿ ಉರಿಯುತ್ತಿರುತ್ತದೆ.'

'ಭಾರತದಲ್ಲಿ ವಿಚ್ಛೇದನದ ಪರಿಸ್ಥಿತಿ ಹೇಗಿದೆ?'

'ನಮ್ಮ ದೇಶದಲ್ಲಿ ವಿವಾಹ ಸಾಮಾಜಿಕ ಅಥವಾ ಕಾನೂನಿಗೆ ಸಂಬಂಧಿಸಿದ ಪ್ರಕ್ರಿಯೆ ಮಾತ್ರವಲ್ಲ, ಅದನ್ನು ಸ್ತ್ರೀ–ಪುರುಷರ ನಡುವೆ ಜೀವನಪರ್ಯಂತ ನಿರ್ವಹಿಸುವ ಸಂಕಲ್ಪವೆಂದು ತಿಳಿಯಲಾಗುತ್ತದೆ. ಭಾರತದಲ್ಲಿ ವಿಚ್ಛೇದನ ಬಹು ಕಡಿಮೆ ಸಂಖ್ಯೆಯಲ್ಲಿದೆ; ಅದರೂ ಕಾಲದೊಂದಿಗೆ ವಿಚ್ಛೇದನಗಳೂ ಹೆಚ್ಚುತ್ತಿವೆ, ಆದರೆ ಇದು ಪ್ರಸ್ತುತ ಸರಾಸರಿ ಎರಡರಷ್ಟು ಮಾತ್ರ.'

'ಸರಾಸರಿ ಎರಡರಷ್ಟು ಮಾತ್ರ! ಅಂದರೆ ಸರಾಸರಿ ತೊಂಬತ್ತೆಂಟರಷ್ಟು ಯಶಸ್ಸು...!'

'ಹೌದು, ಪಶ್ಚಿಮದ ದೇಶಗಳಿಗೆ ಹೋಲಿಸಿದರೆ ಇದು ತುಂಬಾ ಕಡಿಮೆಯೇ. ಆದರೆ, ಒಂದು ವೇಳೆ ಪಾಶ್ಚಾತ್ಯ ದೇಶಗಳಂತೆ ನಮ್ಮ ಸಮಾಜದಲ್ಲೂ ವಿಚ್ಛೇದನಕ್ಕೆ ಸಂಬಂಧಿಸಿದ ಸಾಮಾಜಿಕ ಅಭಿಪ್ರಾಯಗಳು ಬದಲಾದರೆ, ಒಪ್ಪಿಗೆ ಸಿಕ್ಕರೆ ಹಾಗೂ ವಿಚ್ಛೇದನದ ನಿಯಮಗಳು ಸರಳವಾದರೆ ಭಾರತದಲ್ಲೂ ಸಹ ಬಹುಶಃ ಸರಾಸರಿ ಐವತ್ತರಷ್ಟು ಜೋಡಿಗಳು ಬೇರೆಯಾಗುತ್ತಾರೆ.'

ಪಾಲ್ ನಗುತ್ತಿದ್ದಾನೆ.

ಸರಿ, ನೀವು ಹೇಗೆ ವಿವಾಹವಾಗುತ್ತೀರಿ ಎಂಬುದಕ್ಕೆ ಮಹತ್ವವಿಲ್ಲ, ನಿಮ್ಮ ವೈವಾಹಿಕ ಜೀವನ ಹೇಗೆ ಸಾಗುತ್ತಿದೆ ಎಂಬುದು ಮಹತ್ವದ್ದಾಗಿದೆ.